ಕಾವ್ಯಾ ಕಡಮೆ

ಕಲೆ: ರೂಪಶ್ರೀ ಕಲ್ಲಿಗನೂರ್

# ಮಾರ್ಕೋನ ಏಕಾಂತ

ಮಾರ್ಕೋ ಮೆಟ್ಟಿಲುಗಳ ಮೇಲೆ ಕಳ್ಳ ಹೆಜ್ಜೆ ಊರಿ ಬರುವಾಗ ಆ ಸದ್ದನ್ನು ನಿರ್ಲಕ್ಷಿಸಲು ನನಗೆ ಆಗುವುದಿಲ್ಲ. ಸದ್ದಾಗಬಾರದು ಎಂದು ಅವನು ತೆಗೆದುಕೊಳ್ಳುವ ಮುಂಜಾಗ್ರತೆಯಲ್ಲೇ ಒಂದು ಬಗೆಯ ನಿಯಮಿತ ಸಪ್ಪಳವಿದೆ. ಮೊದಲ ಮೆಟ್ಟಿಲ ಮೇಲೆಯೇ ಶೂ ಕಳಚಿ ಅವುಗಳನ್ನು ತನ್ನ ಎಡಗೈಯಲ್ಲಿ ಹಿಡಿದುಕೊಂಡಿದ್ದಾನೆ. ಅವನ ಬಲಗೈ ಮೆಟ್ಟಿಲಿನ ಕಟಾಂಜನವನ್ನು ಆಸರೆಗಾಗಿ ಸವರುತ್ತ ಮೆಲ್ಲನೆ ಏರಿ ಬರುತ್ತಿದೆ. ಬಿಸಿಲಿಗೂ ಮಳೆಗೂ ಮಂಜಿಗೂ ಚಳಿಗೂ ಸವೆದು ಅಲ್ಲಲ್ಲಿ ಬಿರುಕು ಬಿಟ್ಟು ದೊರಗಾದ ಮೆಟ್ಟಿಲುಗಳ ಮೇಲೆ ನಡೆವ ಮಾರ್ಕೋನ ಸಾಕ್ಸಿನ ದ್ಸ್... ದ್ಸ್... ಎಂಬ ತೀಕ್ಷ್ಣ ಸದ್ದು ಆ ಮಧ್ಯರಾತ್ರಿಯ ನೀರವದಲ್ಲಿ ಸುಸ್ಪಷ್ಟವಾಗಿ ಕೇಳಿಸುತ್ತದೆ. ರಭಸದಿಂದ ಮುನ್ನುಗ್ಗುವ ರೈಲು ಸಮೀಪದ ಹಳಿಗಳಿಗೆಲ್ಲ ಕಂಪನ ದಯಪಾಲಿಸುವಂತೆ ಮಾರ್ಕೋನ ಹೆಜ್ಜೆಗಳು ಆ ಹದಿನಾಲ್ಕು ಮೆಟ್ಟಿಲುಗಳ ವಿನ್ಯಾಸಕ್ಕೆ ತಾತ್ಕಾಲಿಕವಾಗಿ ಜೀವ ನೀಡಿವೆ.

ತನ್ನ ಬಳಿಯಿರುವ ಕೀಲಿಕೈಯಿಂದ ಮಾರ್ಕೋ ನಿಧಾನವಾಗಿ ಬೀಗ ತೆಗೆವಾಗ ನೀರಲ್ಲಿ ನಾಣ್ಯ ಬಿದ್ದಂತೆ ಸಣ್ಣ ಶಬ್ದವಾಗುವುದು. ಒಳಗೆ ಬಂದು ಬಾಗಿಲ ಪಕ್ಕವೇ ಇರುವ ನನ್ನ ಕೋಣೆಯ ಹೊರಗೆ ಅರೆಕ್ಷಣ ನಿಲ್ಲುತ್ತಾನೆ. ನಾನು ಹೊರ ಬಂದು ಕೇಳಬಹುದಾದ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ಆಗ ಅವನ ಮನಸ್ಸು ರೂಪಿಸುತ್ತಿರಬಹುದು. ನಾನು ಏಳದಿರುವುದನ್ನು ನೋಡಿ ಅವನಲ್ಲಿ ಸಮಾಧಾನ ಮೂಡಿದೆ. ಮುಂದಿನ ಐದಾರು ಹೆಜ್ಜೆಗಳಲ್ಲಿ ಊರಿಕೊಂಡ ಒಂದು ಬಗೆಯ ಲಘುತನದಿಂದ ನಾನದನ್ನು ಹೇಳಬಲ್ಲೆ. ಮತ್ತೆ ಎಚ್ಚೆತ್ತು ಸಾವಕಾಶವಾಗಿ ತನ್ನ ರೂಮಿನೆಡೆಗೆ ಸರಿದು ಹೋಗಿದ್ದಾನೆ. ಅದ್ಯಾಕೋ ನಿಂತನಲ್ಲ ತನ್ನ ಕೋಣೆಯ ಬಾಗಿಲಲ್ಲಿ. ಬಹುಶಃ ಶೂಗಳನ್ನು ಬಾಗಿಲ ಬಳಿಯಿರುವ ಶೂ ರ್‍ಯಾಕಿನಲ್ಲಿ ಬಿಡದೇ ಗಡಿಬಿಡಿಯಲ್ಲಿ ಕೈಯಲ್ಲಿ ಹಿಡಿದೇ ಹೋಗಿಬಿಟ್ಟಿರಬಹುದು. ಮತ್ತೆ ತಿರುಗಿ ಬಾಗಿಲ ತನಕ ಬಂದು ರಿಸ್ಕ್ ಯಾಕೆ ತೆಗೆದುಕೊಳ್ಳಬೇಕು ಎಂದು ಶೂಗಳನ್ನು ತನ್ನ ಕೋಣೆಗೇ ಒಯ್ದಿರಬಹುದು. ಮುಂಜಾನೆ ಎದ್ದು ನೋಡಿದಾಗ ರ್‍ಯಾಕಿನಲ್ಲಿ ಅವನ ಶೂ ಇಲ್ಲದಿರುವುದ ನೋಡಿ ನಾನು ಆ ಸಂಶಯವನ್ನು ಬಗೆಹರಿಸಿಕೊಂಡಿದ್ದೇನೆ.

ಹಾಗೆಲ್ಲ ನಾನೇ ಮಾರ್ಕೋನ ಮಧ್ಯರಾತ್ರಿಯ ಈ ಓಡಾಟಗಳಿಗೆ ಲಕ್ಷ್ಯ ಕೊಡದಿದ್ದರೂ ಕೆಳಗಿನ ಮನೆಯ ಮಿಸಸ್ ಆಂಡರ್ಸನ್ ತಪ್ಪದೇ ತಮ್ಮ ಫಿರ್ಯಾದು ಒಪ್ಪಿಸುತ್ತಾರೆ. “ನಿನ್ನೆ ಮಾರ್ಕೋ ತಡವಾಗಿ ಮನೆಗೆ ಬಂದನೇನು? ಹಾಗೆಲ್ಲ ಅಪವೇಳೆಯಲ್ಲಿ ಸದ್ದಾದರೆ ನಮ್ಮ ಬಾಸಿ ಸರಿಯಾಗಿ